Dd-351
T.P-2

51st Year of Publication ★ SATYAVADI Daily, MYSORE 4

Reg No B G 155 10-8-1968

ಸ್ಥಳೀಯ ಸರ್ವಾಮೂವಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ವಾಮಿಕರು : ತಿರುಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶ್ರೇಷ್ಠ ನ್ಯಾಯಾಧೀಶರ ಮೇಲೆ ವಕೀಲರ ಅವಿಶ್ವಾಸ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆನೆಪಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ನುತ್ತಿತರಗಣ್ಯರು ಅಭಿನಂದನೆ, ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ಸೇ೦ದಾನಿ ಡಾ|| ಎಂ.ಸಿ ನೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನೀವು ನಾಳ್ಕು ಅಂಗಡಿ ಸುತ್ತುವುದೂ ಒಂದೇ ಸೆಟ್ಟಿಗೆ ಬ್ಯಾಂಕ್ ರೋಡ್ ಬಾಹುಷರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಆವರಲ್ಲಿ ಸಾಫ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮುಕ್ತ ನ್ಯಾಯವಾದ ಬೆಲೆ. ಚೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಕಾಂಗ್ರೆಸ್ ಸದಸ್ಯತನ

ಚಿತ್ರದುರ್ಗದ ಆಯ್ಕೆರು ಮತ್ತು ಹಿರಿಯೂರು ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರು ಆದ ಶ್ರೀ ಈಶ್ವರಪ್ಪನವರು ಎಂ ಪಿ ಸಿ ಸಿ ಅಧ್ಯಕ್ಷ ಡಾ|| ನಾಗಪ್ಪ ಆಳ್ವರನ್ನು ಕಂಡು ಮಾತನಾಡಿದ ನಂತರ ಕಾಂಗ್ರೆಸಿಗೆ ಸೇರಿದರೆಂದು ಬೆಂಗಳೂರು ವಾರ್ತೆ.

★

ಹೊಸಳಿಗೆ ಆಹುತಿ

ತಿಪಟೂರಿನ ಗ್ರಾಮದ (ದೊಡ್ಡಕೆರೆಯ ಬಳಿರುವ ಹಾಲ್ಕು ಮೊಸಳೆಗಳು ಹತ್ತು, ಹನ್ನೆರಡು ವರ್ಷದ ಬಾಲಕರಿಬ್ಬರನ್ನು ನುಂಗಿಡೆ.

●

ಪಸ್ತಗಿರಿ

ಪಾರ್ಲಿಮೆಂಟು ಭವನದೆಡೆರು ಮಂತ್ರಿಗಳನ್ನು ಕಾಣಲು ಮೆರವಣಿಗೆಯಲ್ಲಿ ಬಂದ ಪಾರ್ಲಿಮೆಂಟ್ ಸದಸ್ಯರನ್ನು ದಸ್ತಗಿರಿ ಮಾಡಿದ ಬಗ್ಗೆ ರಾಜ್ಯಸಭೆಯಲ್ಲಿ ಹಲವು ಸದಸ್ಯರು ಪ್ರತಿಭಟಿಸಿದರೆಂದು ನವ ದೆಹಲಿ ವಾರ್ತೆ.

★

ವಿಮಾನ ಓಡಾಟ

ತಿರುಪತಿಗೆ ಹೋಗುವ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಹೈದರಾಬಾದಿನಿಂದ ಕಡಪಾಕ್ಕೆ ವಿಮಾನ ಓಡಾಟ ಏರ್ಪಡಿಸಲಾಯಿತು.

★

ಉದಾರ ದಾನ

ಪ್ರಾಣಿಗಳಿಗೆ ಕ್ರೌರ್ಯ ಪ್ರತಿಬಂಧಕ ಸಂಘಕ್ಕೆ ರಾಜ್ಯಪಾಲ ಶ್ರೀ ಪಾಠಕ್ ರೂ. 1001 ಉದಾರ ದಾನ ಮಾಡಿದ್ದಾರೆ.

○ ಆಂಧ್ರದಿಂದ ಅಕ್ಕಿ ಸಾಗಾಣಿಕೆ ಕಡಿಮೆ ಆಗುವ ಸಂಭವವಿದೆ.

ಕಲ್ಕತ್ತಾದ ವಕೀಲ ಸಂಘದವರು ಅಲ್ಲಿನ ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶ ಶ್ರೀ ಡಿ. ಎನ್. ಸಿನ್ಹರ ಬಗ್ಗೆ ಅವಿಶ್ವಾಸ ಸೂಚಿಸಿ ಅವರನ್ನು ಬೇಕೆ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವಂತೆ ಕೇಳಿಕೊಂಡಿದ್ದಾರೆ. ಅಡ್ವೊಕೇಟರುಗಳು ಸೋಮವಾರ ಸಾಂಕೇತಿಕ ಮುಷ್ಕರ ನಡೆಸಿ ಅನಂತರ ಅವರು ವರ್ಗವಾಗುವ ವರೆಗೆ ಶ್ರೇಷ್ಠ ನ್ಯಾಯಾಧೀಶರ ನ್ಯಾಯಾಲಯವನ್ನು ಬಹಿಷ್ಕಾರ ಹಾಕಲು ನಿರ್ಧರಿಸಿರುವರು. ಅಡ್ವೊಕೇಟರುಗಳಿಗಿಂತ ಬ್ಯಾರಿಸ್ಟರು ಜೆನ್ನಾಗಿ ಅರ್ಹತೆಯುಳ್ಳವರೆಂದು ಅವರು ಹೇಳಿರುವದು ಅಗತ್ಯವಿಲ್ಲವೆಂದು, ಸತ್ಯವಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

★

ಕೊಚ್ಚಿ ಹೋದರು

ಬ್ರೋಚ್ ಜಿಲ್ಲೆಯಲ್ಲಿ ತುಂಬಿದ ಪ್ರವಾಹದಿಂದ 64 ಮಂದಿ ಕೊಚ್ಚಿ ಹೋದರು ಸೂರತ್ ನಗರದಲ್ಲಿ ತಪತೀ ನದಿಯ ಭೀಕರ ಪ್ರವಾಹದಿಂದ 25 ಮಂದಿ ಸತ್ತಿರುವರು. ಪೂರ್ಣಿ ಜಿಲ್ಲೆಯಲ್ಲಿ ನೂರು ಜನ ಅಸು ನೀಗಿರುವರು. ಸೂರತ್ ನಗರದಲ್ಲಿ ವಿದ್ಯುತ್ ಮತ್ತು ನೀರು ಸರಬರಾಜು ಕೇಂದ್ರಗಳು ನೀರಿನಲ್ಲಿ ಮುಳುಗಿವೆ. ಬೊಂಬಾಯಿ, ಸೂರತ್, ಅಹಮದಾಬಾದು ಗಳಿಗೆ ರೈಲು ಮತ್ತು ರಸ್ತೆ ಸಂಪರ್ಕ ಆ ತಂಕಗೊಂಡಿವೆ. ಆದಕ್ಕಾಗಿ ಬೊಂಬಾಯಿ ಅಹಮದಾಬಾದ್ ಮಧ್ಯೆ ವಿಮಾನ ಓಡಾಟವನ್ನು ಹೆಚ್ಚಿಸಲಾಗಿದೆ.

★

ಮನೆ ಕುಸಿದು ಸಾವು

ದಾಲಿಯಾ, ಜಲಗಾಂ, ನಾಸಿಕ ಜಿಲ್ಲೆಗಳಲ್ಲಿ ವಿಪರೀತ ಮಳೆಯಿಂದ ಉಂಟಾದ ಪ್ರವಾಹದಿಂದ ಮನೆ ಕುಸಿದು 34 ಮಂದಿ ಮಡಿದಿರುವರು.

ಜನರ ಸಂಕಷ್ಟ

ಉತ್ತರ ಬಿಹಾರು ನದಿಗಳ ಪ್ರವಾಹ ಹಾವಳಿಯಿಂದ ನೂರೊಂದು ಗ್ರಾಮಗಳ ಒಂದೂಕಾಲು ಲಕ್ಷ ಜನರು ಸಂಕಷ್ಟಕ್ಕೆ ಈಡಾಗಿದ್ದಾರೆ.

★

ಮುಳುಗಿ ಮರಣ

ಸಿಮ್ಲಾದಿಂದ ಬಂದಿರುವ ವಾರ್ತೆಯ ಪ್ರಕಾರ ಚಿಂಬಾ ಜಿಲ್ಲೆಯ ನಾಳೆಯೊಂದ ತಲ್ಲಿ ಇಬ್ಬರು ಮುಳುಗಿ ಸತ್ತರು.

★

ಹತ್ತು ಜನರ ಸಾವು

ಖಟಮಂಡುವಿನಿಂದ ಬಂದಿರುವ ವರದಿ ಪ್ರಕಾರ ಅಕಾಲ ಬೇಸಿ ಗ್ರಾಮದಲ್ಲಿ ಮನೆ ಕುಸಿತದಿಂದ ಹತ್ತು ಮಂದಿ ಸತ್ತರು.

★

ಕೆಲಸದಿಂದ ವಜ

ವರ್ಕ್ ಟು ರೂಲ್ ಮುಷ್ಕರ ನಡೆಸಿದ ಆಂಡನ್ ಮತ್ತು ನ್ಯೂಜರ್ಸಿಯ ಪತ್ರಿಕಾ ನೌಕರರು ನ್ಯೂಸ್ ಪೇಪರ್ ಪ್ರಕಟಣೆಕಾರರ ಸಂಘದ ನಿರ್ಧಾರದಂತೆ ವಜಾ ಮಾಡಲ್ಪಟ್ಟರು.

● ಜಾಲಿಯಾದಲ್ಲಿ ಮನಬಿಗ್ ಜಂಡದ ಮೆಕವಣಿಗೆ ಮೇಲೆ ಪೊಲೀಸರು ಗುಂಡು ಹಾರಿಸಲು ಒಬ್ಬ ಸತ್ತು ಹನ್ನೆರಡು ಜನ ಗಾಯಗೊಂಡರು.

○ ಜುಲೈ ಮಾಹೆಯ ತುಂದುವರಿದ ಪುರಸಭೆ ಅಧಿವೇಶನವು ಮೈಸೂರು ಪುರಸಭೆ ಭವನದಲ್ಲಿ ಈ ತಿಂಗಳು 14 ನೇ ತಾ|| ಮಧ್ಯಾಹ್ನ 4 ಘಂಟೆಗೆ ನಡೆಯುವುದು.

○ 9 ನರೆ ಸಾವಿರ ಟನ್ ಬಾಸುಮತಿ ಅಕ್ಕಿ ವಿದೇಶಕ್ಕೆ ರಫ್ತು ಮಾಡಲು ಒಪ್ಪಂದವಾಗಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ವೈಜ್ಞಾನಿಕವಾದ ಆಚಾರಗಳನ್ನು ನಾವು ಬಿಟ್ಟಲ್ಲಿ. ಅನೇಕ ಮೂಢಾಚಾರಗಳು ನಮ್ಮನ್ನು ಅಂಟಿಕೊಳ್ಳುತ್ತವೆ, ಧರ್ಮದಿಂದ ದೂರವಾಗುತ್ತೇವೆ : ಕೊನೆಗೆ ಪ್ರಪಂಚದಲ್ಲಿ ಹಿಂದೂ ಧರ್ಮವು ನಾಮಾವಶೇಷವಾಗುತ್ತದೆ. ಅದರಿಂದಲೇ ಶಾಸ್ತ್ರಗಳು ' ಆಚಾರಃ ಪ್ರಥಮೋ ಧರ್ಮಃ " ಎಂದು ಹೇಳಿವೆ. ನಮ್ಮ ಧರ್ಮವನ್ನು ನಾವು ಉಳಿಸಿಕೊಳ್ಳಬೇಕಾದರೆ, ಪ್ರಥಮವಾಗಿ ಆಚಾರ ಪಾಲನೆ ಮಾಡಬೇಕು. ಈ ರೀತಿಯಲ್ಲೇ ನಾವು ಆಚಾರವನ್ನು ಬಿಡುತ್ತಾ ಬಂದಲ್ಲಿ, ಕ್ಷಿಪ್ರದಲ್ಲಿಯೇ ಹಿಂದುಗಳ ಆರ್ಥಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಪರಿಸ್ಥಿತಿಗಳನ್ನು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ.

.... ಆಚಾರ ಪಾಲನೆಗಾಗಿ ನಡೆಸಬಹುದಾದ ಕೆಲವು ಕ್ರಮಗಳು ....

ಆಚಾರವನ್ನು ಬಿಡುತ್ತಾ ಧರ್ಮಬಾಹಿರರಾಗುತ್ತಿರುವ ಹಿಂದುಗಳ ರಕ್ಷಣೆಗೆ ದೇಶಾದ್ಯಂತ ಧಾರ್ಮಿಕ ಸಂಸ್ಥೆಗಳೂ, ಮಠಗಳೂ, ದೇವಾಲಯಗಳೂ ಅದಷ್ಟು ಮುಟ್ಟಿನ ಪ್ರಯತ್ನ ನಡೆಸಬೇಕಾದುದು ಆದ್ಯಕರ್ತವ್ಯವಾಗಿರುತ್ತೆ.

ಈಗ ಧಾರ್ಮಿಕ ಸಂಸ್ಥೆಗಳು ಉಪನ್ಯಾಸಗಳನ್ನು ಏರ್ಪಡಿಸುವುದು, ಧಾರ್ಮಿಕ ಪುಸ್ತಕಗಳನ್ನು ಛಾಪಿಸುವುದು, ಉಚಿತವಾಗಿ ಪುಸ್ತಕಗಳನ್ನು ಹಂಚುವುದು, ದೇವರ ಉತ್ಸವಗಳನ್ನು ನಡೆಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿವೆ. ಹಿಂದೆ ನಮ್ಮ ಸಮಾಜವು ಆಚಾರನಿಷ್ಠವಾಗಿದ್ದಾಗ ಇಷ್ಟೊಂದು ಕೆಲಸಗಳಿಂದಲೇ ಸಮಾಜದ ಮೇಲೆ ವಿಶೇಷ ಪರಿಣಾಮ ಉಂಟಾಗುತ್ತಿತ್ತು. ಆದರೆ ಹಿಂದು ಆಚಾರಗಳನ್ನು ಸಂಪೂರ್ಣವಾಗಿ ಬಿಟ್ಟಿರುವ ಇಂದಿನ ಸಮಾಜಕ್ಕೆ ಇಷ್ಟು ಕೆಲಸಗಳಿಂದ ಯಾವ ರೀತಿಯ ವ್ಯತ್ಯಾಸವೂ ಉಂಟಾಗುವುದಿಲ್ಲ.

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav shenoi Sri Opera Talkies Padmabhushana Dr. M. C. Modi, Dr. R S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

ಅಶೋಕ ಬಿಬಿನ್‌ಸೀನ್

ಲಾಸ್ಯಡ್ಕೆ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳಿಗೂ ಮಳಿಗೆ

ವುಡ್‌ಲಾಂಡ್ 9-8-68 ರಿಂದ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ —

ಫಸ್ಟ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ,

ಮುಕ್ರಿ, ಆಗಾ ಮುಂತಾದವರು.

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— ಜನವರಿಯ 5 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀಮದ್ವಾಲಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾತ್ತ ಅನುಗ್ರಹ ಕೃಪೆಯಿಂದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪಶುಪೆಯಲ್ಲಿ, ಶುದ್ಧಖಾದಿಯಲ್ಲಿ, ಪಶುವೈದ್ಯ, ಪಚಾರಗಳ ಏಳ್ಗೆಯ ಪ್ರಚಾರ ಮಾಡುವಲ್ಲಿ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣಾ ವ್ಯವಸ್ಥಾಪಕರು ಏನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ.ಎನ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿಷ್ಣುಮಂಗಳಂ ಪುರ, ಮೈಸೂರು

ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರನಿರತ ಹೊಂಗನೂರು

ಗೋರಕ್ಷಣಾ ಅಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಅಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮಾಡಿ, ಹಾಲೆರೆಯುವ ತಾಯಿಗಳು ಹೆಚ್ಚಲಿ ನಡೆಯಲಿ

Edited, Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram, Mysore 4